ಸಂಪುಟ: ೩ ಸಂಚಿಕೆ: ೭ ಪುಟ: ೪ ಡಿಸೆಂಬರ್ ೨೦೧೯
* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ ಮಾಸಪತ್ರಿಕೆ

# ಅಂಗಳ

ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ

ಸಂಪಾದಕರು: ಡಾ.ಎಂ.ಸಿ.ಮನೋಹರ ಸಂಚಿಕೆ ಸಂಪಾದಕರು: ಚೇತನಾ ಭಟ್
www.arivu.org | e-mail: info@arivu.org ೯೪೮೨೨ ೭೭೮೭೨

## ಕಸವನ್ನು ರಸವನ್ನಾಗಿಸಿದ ವಿಷಯಾಧಾರಿತ ಕಲಿಕೆ





ಪ್ರತಿ ಬಾರಿಯಂತೆ ಹತ್ತು ಹಲವು ವಿಷಯಗಳ ಬಗ್ಗೆ ಚರ್ಚಿಸಿದ ನಂತರ ಈ ಬಾರಿಯ ವಿಷಯಾಧಾರಿತ ಕಲಿಕೆಗೆ ಆರಿಸಿಕೊಂಡ ವಿಷಯ 'ಕಸ'. ಹೌದು, ಕಸ ತುಂಬಾ ವ್ಯಾಪಕವಾದ ಮತ್ತು ಆಳವಾದ ವಿಷಯ ಹಾಗೂ ಪ್ರಸ್ತುತ ಜಾಗತಿಕ ಮಟ್ಟದ ಸಮಸ್ಯೆಯೂ ಆಗಿದೆ.

ಶುರುವಿನಲ್ಲಿ ಕಸವೆಂದರೆ ಬರೀ ಕಸದ ಬುಟ್ಟಿಯಲ್ಲಿ, ಬೀದಿ ಯಲ್ಲಿ, ಮನೆಯಲ್ಲಿ, ಶಾಲೆಯಲ್ಲಿ ಬಿದ್ದ ಧೂಳು, ಎಲೆ, ಕಾಗದದ ತುಂಡುಗಳು, ಪ್ಲಾಸ್ಟಿಕ್ ಮುಂತಾದ ವಷ್ಟೇ ಅಲ್ಲವೇ ಎಂಬಂತ್ತಿತ್ತು. ಇವುಗಳ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಒಮ್ಮೆ ನಾವೆಲ್ಲರೂ ಸೇರಿ ಶಾಲೆಯ ಆವರಣವನ್ನು ಸ್ವಚ್ಛಗೊಳಿಸಿದಾಗ ಅಲ್ಲಿ ಸಿಕ್ಕ ಪ್ಲಾಸ್ಟಿಕ್, ಕಬ್ಬಿಣ, ಗಾಜು, ಪೇಪರ್, ಇ- ವೇಸ್ಟ್ ಮುಂತಾದವುಗಳನ್ನು ಕಲೆಹಾಕಿ ಬೇರ್ಪಡಿಸಿದೆವು. ಆಗ ಅವುಗಳಲ್ಲಿ ಕೊಳೆಯುವ ಕಸ ಹಾಗೂ ಕೊಳೆಯದ ಕಸಗಳ ಬಗ್ಗೆ ವಿವರಣೆ ನೀಡಿ, ಕೊಳೆಯದ ಕಸಗಳಲ್ಲಿ ಕೆಲವು ವಸ್ತುಗಳನ್ನು ಮರುಬಳಕೆ ಮಾಡಬಹುದೇ ಎಂದು ಚರ್ಚಿಸಿದೆವು.



ಹಾಗೆಯೆ, ನಾವುಗಳು 5R ( Reuse, Recycle, Repurpose, Reduce and Refuse) ಇ-ವೇಸ್ಟ್, ಮೆಡಿಕಲ್ ವೇಸ್ಟ್, ಪ್ಲಾಸ್ಟಿಕ್ ವೇಸ್ಟ್‌ಗಳ ಬಗ್ಗೆ ಮಾತ್ರವಲ್ಲದೆ ವಿವಿಧ ಜಿಲ್ಲೆ, ರಾಜ್ಯ ಹಾಗೂ ದೇಶಗಳಲ್ಲಿನ ಕಸ ನಿರ್ವಹಣೆಯ ಬಗ್ಗೆ ಚರ್ಚಿಸಲಾರಂಭಿಸಿದೆವು. ಅದಕ್ಕೆ ಪೂರಕವಾದ ವಿಷಯಗಳಿಗೆ ಸಂಬಂಧಿಸಿದಂತೆ ಹಲವಾರು ವೃತ್ತಪತ್ರಿಕೆಗಳು ಹಾಗೂ ನಿಯತಕಾಲಿಕೆಗಳಲ್ಲಿ ದೊರಕಿದ ವಿಷಯಗಳನ್ನು ಹಂಚಿಕೊಳ್ಳಲಾರಂಭಿಸಿದೆವು. ಇದು ಹಲವಾರು ಹೊಸ ವಿಷಯಗಳನ್ನು ಅರಿತುಕೊಳ್ಳಲು ಸಹಾಯಕವಾಯಿತು.

ನಂತರದ ಹುಡುಕಾಟಗಳು ಸ್ವಲ್ಪ ಬಿರುಸಾಗಿ ಸಾಗತೊಡಗಿದವು. ಮಕ್ಕಳಿಗೆ ಸದಾ ಕೈಗೆಟುಕುವ ಪ್ಲಾಸ್ಟಿಕ್‌ನಿಂದ ತಯಾರಿಸಿದ ನೀರಿನ ಬಾಟಲ್, ಊಟದ ಡಬ್ಬಿಗಳು, ಕವರ್‌ಗಳ ಬಗ್ಗೆ ಚರ್ಚಿಸುತ್ತಾ, ಅವು ಎಷ್ಟರ ಮಟ್ಟಿಗೆ ಉಪಯೋಗಿಸಲು ಯೋಗ್ಯವಾಗಿವೆ ಎಂಬುದನ್ನು ಚಿಂತಿಸಲಾರಂಭಿಸಿದೆವು. ಈ ನಿಟ್ಟಿನಲ್ಲಿ ಪ್ಲಾಸ್ಟಿಕ್ ವಸ್ತುಗಳ ಮೇಲೆ ಮುದ್ರಿತವಾಗಿರುವ ತ್ರಿಕೋನ, ಅದರೊಳಗೊಂದು ಸಂಖ್ಯೆ, ಆಯಾ ಸಂಖ್ಯೆಗಳಿಗೆ ನಿಯಮಿತವಾದ ರಾಸಾಯನಿಕ ಸಂಯೋಜನೆ ಇತ್ಯಾದಿಗಳನ್ನು ಸವಿಸ್ತಾರವಾಗಿ ಅರಿತು ಹಂಚಿಕೊಂಡೆವು. ಜೊತೆಗೆ, ಪ್ಲಾಸ್ಟಿಕ್ ಕವರ್‌ಗಳಲ್ಲೂ ಮರುಬಳಕೆ ಮಾಡಬಹುದಾದವು ಹಾಗೂ ಮರುಬಳಕೆ ಮಾಡಲಾಗದವು ಇವೆ ಎಂಬುದನ್ನೂ ತಿಳಿದೆವು. ಸರ್ಕಾರವೇ ಸೂಚಿಸಿರುವಂತೆ ೫೦ ಮೈಕ್ರಾನ್‌ಗಿಂತ ಹೆಚ್ಚಿನ ದಪ್ಪವಿರುವ ಪ್ಲಾಸ್ಟಿಕ್ ಕವರ್‌ಗಳನ್ನು ಮಾತ್ರವೇ ಮರುಬಳಕೆ ಮಾಡಬಹುದು ಎಂಬ ವಿಷಯ ಅರಿವಿಗೆ ಬಂದಾಗ, ಶಾಲೆಯ ಮಕ್ಕಳೇ ತಮ್ಮ ಮನೆಗಳ ಬಳಿಯಿರುವ ಅಂಗಡಿಗಳಿಗೆ ಹೋಗಿ, ಅಲ್ಲಿ ಅವನ್ನು ಬಳಸುತ್ತಿದ್ದಾರೆಯೇ ಎಂಬುದನ್ನು ವಿಚಾರಿಸಿ, ಆಯಾ ಅಂಗಡಿ ಮಾಲೀಕರಿಗೆ ಈ ಬಗ್ಗೆ ಅರಿವು ಮೂಡಿಸಲು ಯತ್ನಿಸಿದರು. ಪ್ಲಾಸ್ಟಿಕ್ ಕವರ್‌ಗಳ ಬದಲಾಗಿ ಪೇಪರ್ ಕವರ್‌ಗಳನ್ನು ಬಳಸುವಂತೆ ಸೂಚಿಸಿದರು. ವಸ್ತುಗಳನ್ನು ಪುನರ್ ಬಳಕೆ ಮಾಡುವುದರಿಂದ ಕಸ ಉತ್ಪಾದನೆಯನ್ನೇ ಕಡಿಮೆ ಮಾಡಬಹುದೆಂಬುದಕ್ಕೆ ಉದಾಹರಣೆಯಾಗಿ ನಮ್ಮ ಮಕ್ಕಳು ನಮ್ಮ ಶಾಲೆಯಲ್ಲಿ ಹಾಳಾದ ಮತ್ತು ಮುರಿದ ಕುರ್ಚಿಯ ಕಾಲುಗಳನ್ನು, ಹಲಗೆಗಳನ್ನು ಬಳಸಿ ಹೊಸದಾಗಿ ಕಾಣುವಂತಹ ಪುಸ್ತಕದ ಕಪಾಟು ಮಾಡಿದರು. ಚಿತ್ರಕಲೆಯಲ್ಲಿ ಆಸಕ್ತಿಯಿರುವ ಮಕ್ಕಳು ಪ್ರಸಕ್ತ ಪರಿಸರದ ಪರಿಸ್ಥಿತಿ ಮತ್ತು ನಮಗವಶ್ಯಕವಿರುವ ಪರಿಸರದ ನಡುವಿನ **ಪುಟ ೨ಕ್ಕೆ**

### ಪರ್ಯಾಯ ಪುನರ್ಬಳಕೆ

ಮುಂದಿನ ಹಂತದಲ್ಲಿ ಪ್ಲಾಸ್ಟಿಕ್ ಕವರ್‌ನ ದಪ್ಪವನ್ನು ಅಳೆಯುವುದು ಹೇಗೆಂದು ಯೋಚಿಸುವಾಗ, ಸ್ಕ್ರೂಗೇಜ್‌ನ ಸಹಾಯದಿಂದ ಅಳೆದು ಅದರಲ್ಲಿ ೫೦ ಮೈಕ್ರಾನ್‌ಗಿಂತ ಹೆಚ್ಚು ಮತ್ತು ಕಡಿಮೆ ಇರುವ ಪ್ಲಾಸ್ಟಿಕ್ ಕವರ್‌ಗಳನ್ನು ವಿಂಗಡಿಸಲು ಕಲಿತುಕೊಂಡರು. ಹಾಗೆಯೆ, ಪ್ಲಾಸ್ಟಿಕ್ ಕವರ್‌ಗೆ ಪರ್ಯಾಯವಾಗಿ ಸೆಲ್ಯೂಲೋಸ್ ಪ್ಲಾಸ್ಟಿಕ್ ಅನ್ನು ಬಳಸಬಹುದೆಂದು ತಿಳಿದಾಗ ಶಾಲೆಯಲ್ಲೇ ಮಕ್ಕಳು-ಶಿಕ್ಷಕರು ಸೇರಿ ಜೋಳದ ಹಿಟ್ಟು, ಗ್ಲಿಸರಿನ್, ವಿನೇಗರ್ ಮತ್ತು ನೀರಿನ ಸಮ್ಮಿಶ್ರಣದೊಂದಿಗೆ ಸೆಲ್ಯುಲೋಸ್ ಪ್ಲಾಸ್ಟಿಕ್‌ನ ಹಾಳೆಯ ಮಾದರಿಯನ್ನು ತಯಾರಿಸಿಯೇಬಿಟ್ಟರು. ಶಾಲೆಯಲ್ಲಿ ಉಪಯೋಗಿಸಿ ಬಿಟ್ಟ ಸೀಮೆಸುಣ್ಣದ ಪುಡಿಯನ್ನು ಪುನರ್‌ಬಳಸಿ ಮಕ್ಕಳೇ ಹೊಸ ಅಚ್ಚನ್ನು ತಯಾರಿಸಿಕೊಂಡು, ಹೊಸ ಸೀಮೆಸುಣ್ಣವನ್ನೂ ಸಿದ್ಧ ಪಡಿಸಿದರು. ಹಳೆಯ ವೃತ್ತಪತ್ರಿಕೆಗಳನ್ನು ಚೂರು ಚೂರು ಮಾಡಿ ಅದರಿಂದ ಹ್ಯಾಂಡ್ ಮೇಡ್ ಪೇಪರ್ ತಯಾರಿಸಿದರು. ಮಕ್ಕಳು ಮತ್ತು ಶಿಕ್ಷಕರು ಶ್ರೀರಾಂಪುರ ಮತ್ತು ಲಿಂಗಾಂಬುಧಿಪಾಳ್ಯದ ಮನೆಗಳ ಸಮೀಕ್ಷೆ ಮಾಡಿ, ಅಲ್ಲಿನ ಕಸ ನಿರ್ವಹಣೆ ಬಗ್ಗೆ ಅರಿತು ಅದನ್ನು ನಕ್ಷೆಗಳ ಮೂಲಕ ಪ್ರತಿಬಿಂಬಿಸಿದರು.

ಛಾಯಾಚಿತ್ರಗಳು: ಅರ್ಚನಾ ಎ.

# ಜೀವನಕ್ಕೆ ಗಟ್ಟಿ ಅಡಿಪಾಯ ಹಾಕಿಕೊಟ್ಟ ಅನುಭವದ ಕಲಿಕೆ


**ವೃತ್ತಿಯ ವೃತ್ತಾಂತ**
ಪೋಷಕರ ಅಂಕಣ

ನಮ್ಮ ತಂದೆ–ತಾಯಿಗೆ ನಾನು ಒಬ್ಬನೇ ಮಗ. ಆದರೆ, ನಾನು ಬೆಳೆದಿದ್ದು ಒಂದು ಅವಿಭಕ್ತ ಕುಟುಂಬದಲ್ಲಿ. ಹಾಗಾಗಿ, ನನಗೆ ನನ್ನ ದೊಡ್ಡಪ್ಪ–ಚಿಕ್ಕಪ್ಪನ ಮಕ್ಕಳೂ ಕೂಡ ಸ್ವಂತ ಸಹೋದರ– ಸಹೋದರಿಯರ ಹಾಗೆ.

ನಮ್ಮ ತಾತನ ಪ್ರಿಂಟಿಂಗ್ ಪ್ರೆಸ್ ಮಹಡಿಯ ಮೇಲೆ ನಮ್ಮ ಮನೆ ಇದ್ದುದರಿಂದ, ನನ್ನ ಆಟದ ಅರ್ಧ ಭಾಗ ಅಲ್ಲಿ ಮಾಡುವ ಕೆಲವು ಕೆಲಸಗಳಾಗಿರುತ್ತಿದ್ದವು. ಕೆಲಸದ ನಿಮಿತ್ತ ನಮ್ಮ ತಂದೆಯ ಜೊತೆ ನನಗೆ ಬಹಳ ಚಿಕ್ಕ ವಯಸ್ಸಿನಲ್ಲೇ ಸರ್ಕಾರಿ ಕಚೇರಿ/ನೌಕರರು, ಗಣ್ಯ ವ್ಯಕ್ತಿಗಳು, ಪೊಲೀಸ್, ಟ್ಯಾಕ್ಸಿ ಡ್ರೈವರ್‌ಗಳು, ಗ್ಯಾರೇಜು ಕೆಲಸ... ಹೀಗೆ ಹಲವು ಆಯಾಮಗಳ ಪರಿಚಯ ಆಯಿತು ಹಾಗೂ ಅದರಿಂದ ಹತ್ತು ಹಲವು ಕಲಿಕೆಗಳಾದವು.

ಹತ್ತನೇ ತರಗತಿಯ ನಂತರ ನಾನು ಡಿಪ್ಲೊಮಾ ಓದಲು ದಾವಣಗೆರೆಗೆ ಹೋದೆ. ಅಲ್ಲಿ ನನಗೆ ಹಾಸ್ಟೆಲ್ ಜೀವನದ ಪರಿಚಯ ಆಯಿತು. ಆನಂತರ ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ ಬಿ.ಇ. (ಇ ಆ್ಯಂಡ್ ಸಿ) ಮುಗಿಸಿದೆ. ಆಗ ನನಗೆ ಇದ್ದ ಎರಡು ದಾರಿಗಳೆಂದರೆ, ವ್ಯವಹಾರ ಅಥವಾ ಐ.ಟಿ. ಕೆಲಸ. ಸ್ವಲ್ಪ ಗೊಂದಲದಲ್ಲಿಯೇ ನಾನು ಎರಡೂ ದೋಣಿಯಲ್ಲಿ ಕಾಲಿಟ್ಟೆ. ಕುವೆಂಪುನಗರದಲ್ಲಿ ಒಂದು ಸೆಲ್ಫ್ ಸರ್ವೀಸ್ ಹೋಟೆಲ್ ಶುರು ಮಾಡಿದೆ. ಹಾಗೆಯೆ, ಒಂದು ಚಿಕ್ಕ ಕಂಪನಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿಯೂ ಕೆಲಸ ಮಾಡುತ್ತಿದ್ದೆ.

ಈಗ ನಾನು ಇನ್‌ಫೋಸಿಸ್‌ನಲ್ಲಿ ಸೀನಿಯರ್ ಪ್ರಾಜೆಕ್ಟ್ ಮ್ಯಾನೇಜರ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಐ.ಟಿ. ಕೆಲಸದಲ್ಲಿ ನನಗೆ ಖುಷಿ ತರುವುದು ಅದರಲ್ಲಿ ಇರುವ ರಚನಾತ್ಮಕ ವಿಧಾನ, ಸಮಯ ಪಾಲನೆ ಹಾಗೂ ನಾವು ಗಳಿಸುವ ಹೊಸ ಗ್ರಾಹಕರು, ಅದರಿಂದ ಬರುವ ಕೋಟಿಗಟ್ಟಲೆ ಹಣ (ನನ್ನ ಜೇಬಿಗಲ್ಲ), ಇನ್‌ಫೋಸಿಸ್ ಅಂತಹ ಒಂದು ದೈತ್ಯ ಕಂಪನಿಯ ಬೆಳವಣಿಗೆಯಲ್ಲಿ ನನ್ನದೂ ಒಂದು ಸಾಸಿವೆ ಕಾಳಿನಷ್ಟು ಕೊಡುಗೆ ಇದೆ ಅನ್ನುವ ಹೆಮ್ಮೆ, ದಿನನಿತ್ಯ ಬರುವ ಹೊಸ ಹೊಸ ಸವಾಲುಗಳನ್ನು ಎದುರಿಸಲು ಮೈಯೊಡ್ಡಿ ನಿಲ್ಲಬೇಕೆಂಬ ಛಲ. ನನ್ನ ಎಲ್ಲ ಕೆಲಸಕ್ಕೆ ನನ್ನ ಬೆನ್ನೆಲುಬಾಗಿ ಇರುವ ನನ್ನ ತಂಡದ ಸದಸ್ಯರು ಮತ್ತು ಕುಟುಂಬ ಅಂದರೆ ಉತ್ಪ್ರೇಕ್ಷೆ ಆಗುವುದಿಲ್ಲ! ನನ್ನ ಕೆಲಸಕ್ಕೆ ಬೇಕಾದ ಹಲವು Soft Skills (Negotiation, Risk Management, planning) ನಾನು ಕಲಿತಿದ್ದು ನನ್ನ ಬಾಲ್ಯದಲ್ಲಿ ಅಥವಾ ನಾನು ವ್ಯವಹಾರ ನಡೆಸುತ್ತಿದ್ದಾಗ. ಈ ಎಲ್ಲ ಅನುಭವಗಳಿಂದಾದ ಕಲಿಕೆ ನನ್ನ ಜೀವನಕ್ಕೆ ಗಟ್ಟಿಯಾದ ಅಡಿಪಾಯ ಹಾಕಿಕೊಟ್ಟಿದೆ.



–ರಘುನಂದನ್, ಹಿರಿಯ ಯೋಜನಾ, ನಿರ್ವಹಣಾಧಿಕಾರಿ, ಇನ್‌ಫೋಸಿಸ್, ಮೈಸೂರು

## ಸಂಪಾದಕೀಯ

**ಎರಡನೇ ಬಾರಿಗೆ ಅಂಗಳ ಪತ್ರಿಕೆಯ ಸಂಚಿಕೆ ಸಂಪಾದಕಿಯಾಗಿ ಕಾರ್ಯನಿರ್ವಹಿಸಿದ್ದು ನನಗೆ ತುಂಬಾ ಸಂತೋಷ ತಂದು ಕೊಟ್ಟಿದೆ. ಕಳೆದ ತಿಂಗಳ ಸಂಚಿಕೆಯನ್ನು ಕಲಿಕಾ ಅನುಭವ ಹಂಚಿಕೆಯ ದಿನ ಶ್ರೀ ಎಂ.ಆರ್.ರಾಮಶೇಷ ಅವರು ಬಿಡುಗಡೆ ಮಾಡಿದರು. ನವೆಂಬರ್ ತಿಂಗಳಿನಲ್ಲಿ ಮಕ್ಕಳ ದಿನಾಚರಣೆಯಂದು ಮಕ್ಕಳಿಗೆ ವಿವಿಧ ರೀತಿಯ ಆಟಗಳನ್ನು ಆಡಿಸಿ, ಸಿಹಿ ನೀಡಿ ಸಂತೋಷವಾಗಿ ಮನೆಗೆ ಹಿಂತಿರುಗುವಂತೆ ಯೋಜನೆ ಕೈಗೊಂಡಿದ್ದೆವು. ಮಕ್ಕಳಲ್ಲಿ ತಮ್ಮದೇ ಶೈಲಿಯಲ್ಲಿ ಕಥೆ, ಕವನ, ಪ್ರಬಂಧಗಳನ್ನು ಬರೆಯುವ ಉತ್ಸಾಹ ಹೆಚ್ಚಾಗುತ್ತಿರುವುದನ್ನು ನೋಡಿದರೆ ಹೆಮ್ಮೆ ಎನಿಸುತ್ತಿದೆ. ಈ ಸಂಚಿಕೆಯಲ್ಲಿ ನನಗೆ ಬರೆಯಲು ಅವಕಾಶ ಮಾಡಿಕೊಟ್ಟ ಮುದ್ದು ಮಕ್ಕಳಿಗೆ, ಸಹಾಯ ಮಾಡಿದ ಸವಿತಾ, ಜಾಯ್ಲಿನ್, ಅರ್ಚನಾ ಅವರಿಗೆ ಧನ್ಯವಾದ ಹೇಳಬಯಸುವೆ.**



**– ಚೇತನಾ ಭಟ್, ಸಂಚಿಕೆ ಸಂಪಾದಕಿ**

## ಮೃಗಾಲಯದಲ್ಲಿ ಆಟ ಪಾಠ

೨ನೇ ತರಗತಿ ಮಕ್ಕಳಾದ ನಮ್ಮನ್ನು ಮೃಗಾಲಯಕ್ಕೆ ಕರೆದುಕೊಂಡು ಹೋಗಿದ್ದರು. ನಮ್ಮ ಜೊತೆಗೆ ಚೇತನಾ ಅಕ್ಕ, ಅಭಿ ಅಣ್ಣ, ಶೈಲಜಾ ಅಕ್ಕ ಇದ್ದರು. ಮೃಗಾಲಯಕ್ಕೆ ಹೋಗುವ ಮೊದಲು ಚೇತನಾ ಅಕ್ಕ ಮಾಹಿತಿ ಕೊಟ್ಟಿದ್ದರು. ಅಭಿ ಅಣ್ಣ ಮೃಗಾಲಯದಲ್ಲಿ ನಕಾಶೆ ತೋರಿಸಿ ಅದರಲ್ಲಿ ಇರುವ ಬಣ್ಣ ಆಯಾ ದೇಶಗಳಿಂದ ಬಂದಿರುವ ಪಕ್ಷಿಗಳು ಎಂದು ಗೊತ್ತಾಗುತ್ತದೆ. ಕೋತಿಗಳಿಂದ ಮಾನವ ಹೇಗೆ ಆದ ಎಂಬುದನ್ನು ಕೋತಿಗಳ ಚಿತ್ರ ತೋರಿಸುವುದರ ಮೂಲಕ ವಿವರಿಸಿದರು. ಕರಡಿಯ ಬಾಲದಲ್ಲಿನ ಕೂದಲಿನ ಬಗ್ಗೆ ಮಾಹಿತಿ ನೀಡಿದರು. ಅಲ್ಲಿಯ ಕಸವನ್ನು ಏನು ಮಾಡುತ್ತಾರೆ ಎಂಬುದನ್ನು ವಿವರಿಸಿದರು. ರಾಜಹಂಸ ನೀರಿನ ಮೇಲೆ ಒಂಟಿ ಕಾಲಿನಲ್ಲಿ ನಿಂತು ನಿದ್ದೆ ಮಾಡುತಿತ್ತು. ಹೀಗೆ ವಿವಿಧ ಪ್ರಾಣಿ, ಪಕ್ಷಿ, ಉರಗಗಳನ್ನು ನೋಡುತ್ತಾ ಅವುಗಳ ಬಗ್ಗೆ ತಿಳಿದುಕೊಂಡು ಶಾಲೆಗೆ ಮರಳಿ ಬಂದೆವು. ಅಲ್ಲಿಗೆ ಹೋಗಿ ಇಷ್ಟೆಲ್ಲ ತಿಳಿದುಕೊಂಡು ಬಂದಿದ್ದು ತುಂಬಾ ಆನಂದವಾಯಿತು.



– ಅಮಾತ್ಯ ಚಂದ್ರ, ೨ನೇ ತರಗತಿ

## ಕಸ ತೆಗೆದು ಸ್ವಚ್ಛ ಮಾಡಿದೆವು

ನಮ್ಮ ಮನೆಯ ರಸ್ತೆಯ ತುದಿಯಲ್ಲಿ ಕಸದ ಗುಡ್ಡೆ ಬಿದ್ದಿತ್ತು. ಹಸುವೊಂದು ಆ ಗುಡ್ಡೆಯಲ್ಲಿದ್ದ ಕಸವನ್ನು ತಿನ್ನಲು ಬಂದು ಕಸದ ಜೊತೆಗೆ ಪ್ಲಾಸ್ಟಿಕ್ ಅನ್ನೂ ತಿನ್ನುತ್ತಿತ್ತು. ಅದನ್ನು ನೋಡಿದ ನಾನು ಮತ್ತು ನನ್ನ ಸ್ನೇಹಿತರು, ಪ್ಲಾಸ್ಟಿಕ್ ತಿಂದರೆ ಹಸು ಸಾಯುತ್ತದೆಂದು ತಿಳಿದು ಆ ಸ್ಥಳದಲ್ಲಿದ್ದ ಕಸವನ್ನು ತೆಗೆದು ಸ್ವಚ್ಛ ಮಾಡಿದೆವು.





– ಯುಕ್ತಾ, ೨ನೇ ತರಗತಿ

ರೇಖಾಚಿತ್ರ: ಲಕ್ಷ್ಮೀ

# ಕಸವನ್ನು ರಸವನ್ನಾಗಿಸಿದ ವಿಷಯಾಧಾರಿತ ಕಲಿಕೆ

**ಮೊದಲ ಪುಟದಿಂದ ...**

ವ್ಯತ್ಯಾಸವನ್ನು, ಹಾಗೆಯೇ ಒಬ್ಬ ವ್ಯಕ್ತಿಯಿಂದ, ಮನೆ ಮನೆಯಿಂದ, ಊರು ಊರಿಂದ, ಜಿಲ್ಲೆ–ರಾಜ್ಯ–ದೇಶ ಹೀಗೆ ಇಡೀ ಭೂಮಂಡಲವನ್ನೇ ಶುಚಿಯಾಗಿಡಬಹುದೆಂಬ ಪರಿಕಲ್ಪನೆಯನ್ನು ಚಿತ್ರಗಳ ಮೂಲಕ ವ್ಯಕ್ತಪಡಿಸಿದರು. ಮಕ್ಕಳು ಇ–ವೇಸ್ಟ್ ಬಗ್ಗೆ ತಿಳಿಯುವಾಗ ಅವುಗಳ ನಿರ್ವಹಣೆ ಮತ್ತು ಅದರಲ್ಲಿನ ವಿಷಕಾರಿ ಲೋಹಗಳಿಂದ ಉಂಟಾಗುವ ದುಷ್ಪರಿಣಾಮಗಳನ್ನು ಚರ್ಚಿಸಿದರು. ಆಸ್ಪತ್ರೆಗಳಲ್ಲಿ ಮೆಡಿಕಲ್ ವೇಸ್ಟ್‌ನ ವಿಂಗಡಣೆ ಮತ್ತು ನಿರ್ವಹಣೆಯ ಬಗ್ಗೆಯೂ ಅರಿತರು. ಹಾಗೆಯೆ, ನಾಗೇಶ್ ಹೆಗಡೆಯವರ 'ಶತ್ರುವಿಲ್ಲದ ಸಮರ' ಕೃತಿಯನ್ನು ಆಧರಿಸಿ ತಂತ್ರಜ್ಞಾನ ಅತಿಯಾದರೆ ಅದರಿಂದುಂಟಾಗುವ ಹಾನಿಗಳನ್ನೂ ಚರ್ಚಿಸಿದರು.

ಇವೆಲ್ಲದರ ಮಧ್ಯೆಯೇ ಮಕ್ಕಳು ಮತ್ತು ಶಿಕ್ಷಕರು ಜೆ.ಪಿ.ನಗರದ ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿ ಅಲ್ಲಿನ ಕಸ ನಿರ್ವಹಣೆ ಪ್ರಕ್ರಿಯೆಯನ್ನು ಅರಿತರು. ಪ್ರಾಥಮಿಕ ಹಂತದ ಮಕ್ಕಳೂ ವಿಶ್ವವಿಖ್ಯಾತವಾದ ಸೀ ಶೆಲ್ ಮ್ಯೂಸಿಯಂಗೆ ಭೇಟಿ ನೀಡಿ ಕಪ್ಪೆಚಿಪ್ಪು, ಶಂಖಗಳಿಂದ ಅಲಂಕಾರಿಕ ವಸ್ತುಗಳನ್ನು ಸಿದ್ಧಪಡಿಸಿರುವುದನ್ನು ನೋಡಿದರು. ಈ ಎಲ್ಲ ಪ್ರಕ್ರಿಯೆಯಲ್ಲಿ ಮಕ್ಕಳು ಕಸದಿಂದ ರಸ ಮಾಡುವತ್ತ, ಕಾಗದದ ಕವರ್‌ಗಳು, ದಿನಪತ್ರಿಕೆಗಳಿಂದ ಗೊಂಬೆ, ಚಾಪೆ, ಬಟ್ಟಲು, ತಟ್ಟೆ, ಜೀವಕೋಶದ ಮಾದರಿ, ಫೆರೋ ಮಾದರಿ, ಆಟಿಕೆಗಳನ್ನು ಮಾಡಲು, ಉಪಯೋಗಿಸಿ ಬಿಸಾಕಿದ ಬಾಟಲಿಗಳಿಂದ ಗೊಂಬೆ, ಪಕ್ಷಿಗಳಿಗೆ ನೀರಿಡಲು, ಆಹಾರ ಧಾನ್ಯಗಳನ್ನಿಡುವ ಬಟ್ಟಲುಗಳನ್ನು ಮಾಡಲು, ಹಳೇ ಬಟ್ಟೆ, ರವಿಕೆ ಕಣ, ರಟ್ಟುಗಳಿಂದ ಸೂಚನಾ ಫಲಕಗಳು, ಕಾಲೊರೆಸು, ಹಾರಗಳು, ಬೆಂಕಿಪೊಟ್ಟಣದ ಕಡ್ಡಿಗಳಿಂದ ಘನಾಕೃತಿಗಳು, ಕೆಲವು ರಾಸಾಯನಿಕ ಪ್ರಯೋಗಗಳು, ಹ್ಯಾಂಡ್ ಮೇಡ್ ಪೇಪರ್‌ನಿಂದ ಪುಸ್ತಕ ಗುರುತು (Book Mark), ಪೆನ್ಸಿಲ್‌ನ ಕಸದಿಂದ ಗೊಂಬೆಯ ಮಾದರಿ, ಕರಟ, ಬಳೆಗಾಜು, ಹಳೇ ಕಾಗದ, ಮಣಿಗಳು, ಪೇಪರ್ ಲೋಟ ಮುಂತಾದ ಬಿಸಾಡಿದ ವಸ್ತುಗಳನ್ನು ಮರುಬಳಕೆ ಮಾಡಿ, ಅವುಗಳಿಂದ ವಿವಿಧ ಅಲಂಕಾರಿಕ ವಸ್ತುಗಳನ್ನು ಮಾಡುವು ದನ್ನು ಕಲಿತರು.

ಕಲಿಕಾ ಪ್ರದರ್ಶನದ ದಿನದ ಸಂಜೆ ಎಲ್ಲ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲೂ ಕಸಕ್ಕೆ ಸಂಬಂಧಿಸಿದಂತೆ ಹಾಡು, ನೃತ್ಯ, ನಾಟಕಗಳ ಮೂಲಕ ಮನರಂಜಿಸಿದರು. ಹೀಗೆ ವಿಷಯಾಧಾರಿತ ಕಲಿಕೆಯ ಪ್ರಕ್ರಿಯೆಯಲ್ಲಿ ವಿವಿಧ ತರಗತಿಯ ಮಕ್ಕಳು ಗುಂಪಿನಲ್ಲಿ ಕಲೆತು, ಸಹಕಾರ ಮನೋಭಾವ, ತಮ್ಮಲ್ಲೇ ವಿಷಯಗಳನ್ನು ಹಂಚಿಕೊಳ್ಳುವುದು, ಇತರರನ್ನು ನೋಡಿ ಕಲಿಯುವುದರೊಂದಿಗೆ ಸ್ವಚ್ಛ ಭಾರತ ಆಂದೋಲನ, ತ್ಯಾಜ್ಯ ನಿರ್ವಹಣೆ, ಪ್ಲಾಸ್ಟಿಕ್‌ನಿಂದಾಗುವ ಹಾನಿಯ ಬಗ್ಗೆ ಸರಳವಾಗಿ ತಿಳಿದುಕೊಂಡು ತಮ್ಮ ಜ್ಞಾನವನ್ನು ವಿಸ್ತರಿಸಿಕೊಂಡರು.

– ವೈಷ್ಣವಿ, ಶಿಕ್ಷಕಿ

## ನವೆಂಬರ್ ತಿಂಗಳಿನಲ್ಲಿ ಶಾಲೆಗೆ ಭೇಟಿ ನೀಡಿದ್ದವರು

೧. **ನಾಗಮಣಿ ಜಯ,** ಬೋಧಕಿ ಮತ್ತು ಸಂಶೋಧಕಿ, ಮುಂಬೈ
೨. **ಜೆವಿಲ್, ತೇಜೆಸ್ವರ್ ಮಣಿಕಂಠ,** ಸಂಶೋಧನಾ ವಿದ್ಯಾರ್ಥಿಗಳು, ಮನಃಶಾಸ್ತ್ರ ವಿಭಾಗ, ಮೈಸೂರು
೩. **ಬಿ.ಎಸ್.ಉಲ್ಲಾಸ್ ಶಾನಭಾಗ್,** ಛಾಯಾಗ್ರಾಹಕರು, ಸಾಗರ
೪. **ವಿಜೇತ ಎಂ., ಅರುಣ** ವಿ., ಕಲಾವಿದರು
೫. **ಮೀನಾಕ್ಷಿ ಪುವಿಥಮ್,** ವಾಸ್ತುಶಿಲ್ಪಿ ಮತ್ತು ಶಿಕ್ಷಕಿ, ಧರ್ಮಪುರಿ
೬. **ಜಿ.ಮಾಧವರಾಜ್,** ಶಿಕ್ಷಕರು, ಧರ್ಮಪುರಿ
೭. **ಮಧುಸೂದನ್** ಆರ್.ಜಿ., ವ್ಯಾಪಾರಿ, ಬೆಂಗಳೂರು

# ಕಪ್ಪೆಚಿಪ್ಪು, ಶಂಖಗಳ ಅಲಂಕಾರಿಕ ವಸ್ತುಗಳ ಸಂಗ್ರಹಾಲಯ

ಈ ಬಾರಿ ನಮ್ಮ ಶಾಲೆಯಲ್ಲಿ 'ಕಸ' ಎಂಬ ಪರಿಕಲ್ಪನೆ ವಿಷಯಾಧಾರಿತ ಕಲಿಕೆಯ ವಸ್ತುವಾಗಿತ್ತು. ಈ ಹಿನ್ನೆಲೆಯಲ್ಲಿ ಕಸದಿಂದ ರಸ ಮಾಡುವಲ್ಲಿ ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಮಾಡಿರುವ, ಮೈಸೂರಿನ ಜೆ.ಪಿ.ನಗರದಲ್ಲಿರುವ ಕಪ್ಪೆಚಿಪ್ಪು ಮತ್ತು ಶಂಖಗಳಿಂದ ರಚಿಸಿರುವ ಅಲಂಕಾರಿಕ ವಸ್ತುಗಳ ಸಂಗ್ರಹಾಲಯಕ್ಕೆ ೨ನೇ ತರಗತಿ ಮಕ್ಕಳನ್ನು ಕರೆದುಕೊಂಡು ಹೋಗಿದ್ದೆವು.

ಶ್ರೀಮತಿ ರಾಧಾ ಅವರು ಅಲಂಕಾರಿಕ ವಸ್ತುಗಳನ್ನು ಮಾಡುವ ಉದ್ದೇಶ ಮತ್ತು ಅದಕ್ಕಾಗಿ ತೆಗೆದುಕೊಂಡ ಕಾಲದ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಂಡರು. ಕಪ್ಪೆಚಿಪ್ಪಿನಿಂದ ಮಾಡಿರುವ ಅಕ್ವೇರಿಯಂ, ೧೪ ಅಡಿ ಎತ್ತರವಿರುವ ಸಂತ ಫಿಲೋಮಿನಾ ಚರ್ಚ್, ೧೧ ಅಡಿ ಎತ್ತರದ ಗಣೇಶನ ವಿಗ್ರಹ, ಈಶ್ವರಲಿಂಗ, ದಶಾವತಾರಗಳು,




ಈರುಳ್ಳಿ-ಬೆಳ್ಳುಳ್ಳಿ-ಏಲಕ್ಕಿ ಸಿಪ್ಪೆಗಳಿಂದ ಮಾಡಿರುವ ಹೂದಾನಿಗಳು, ಆಗ್ರಾದ ತಾಜ್‌ಮಹಲ್, ವಿವಿಧ ರೀತಿಯ ಶಂಖ, ಕಪ್ಪೆಚಿಪ್ಪುಗಳು ನಮ್ಮೆಲ್ಲರ ಮನಸ್ಸನ್ನು ಆಕರ್ಷಿಸಿದವು. ನಮ್ಮ ಜೊತೆ ಶಿಕ್ಷಕಿಯರಾದ ಜಾಸ್ಲಿನ್ ಮತ್ತು ರಾಜಲಕ್ಷ್ಮೀ ಕೈಜೋಡಿಸಿದ್ದರು. ಮಕ್ಕಳು ಪ್ರಶ್ನೆಗಳನ್ನು ಕೇಳುವ ಮೂಲಕ ತಮ್ಮಲ್ಲಿದ್ದ ಕುತೂಹಲವನ್ನು ತಣಿಸಿಕೊಂಡರು.

– **ಚೇತನಾ ಭಟ್**

## ಹೇಗೆ ಬಂತು ಈ ಕಲೆ?

ಎಲ್ಲರ ಕಣ್ಣು ಸೆಳೆಯುವ ಹೂವೆ
ನಿನಗೆ ಹೇಗೆ ಬಂತು ಈ ಕಲೆ
ನಿನ್ನ ಆ ಬಣ್ಣ
ಕಂಡು
ಚಿಟ್ಟೆ ಹಾರುವವು
ಅಲ್ಲಲ್ಲೆ



– **ಅಚಲ ಎನ್.,**
೧೧ನೇ ತರಗತಿ

## ನಾವೇ ಹಾಕಿದ ಕಸ

ಕಸ ಕಸ ಕಸ
ಎಲ್ಲಿ ನೋಡಿದರೂ ಕಸ
ಮನೆಯಲ್ಲೂ ಕಸ ಶಾಲೆಯಲ್ಲೂ ಕಸ
ರಸ್ತೆಯಲ್ಲೂ ಕಸ
ಎಲ್ಲಿ ನೋಡಿದರೂ ಕಸ
ಕಸ ಕಸ ಕಸ
ಎಲ್ಲೆಲ್ಲೂ ಕಸ
ತುಂಬಾ ವಿಧ ವಿಧ
ಕಸ
ಯಾರು ಹಾಕಿದ
ಕಸ
ನಾವೇ ಹಾಕಿದ ಕಸ



– **ಸ್ಫೂರ್ತಿ ಎಂ.ಎಸ್.,** ೫ನೇ ತರಗತಿ

## ಪರಿಸರ ಹಾಳು ಮಾಡುವ ಕಸ

ಬೇಡವಾಗಿರುವುದನ್ನು ಭೂಮಿಗೆ ಹಾಕಿ
ಪರಿಸರ ಹಾಳು ಮಾಡುವ ಕಸ
ಜೆ.ಪಿ.ನಗರದಲ್ಲಿ
ಕಸದ ಬೆಟ್ಟ
ಎಷ್ಟೊಂದು
ದೊಡ್ಡದಾಗಿದೆ
ನೋಡಿ
ಅದು ಗಿಡಗಳಿಗೆ
ತೊಂದರೆ
ಯಾಗುತ್ತಿದೆ ಕೇಳಿ



– **ಶಾರದಾ,** ೨ನೇ ತರಗತಿ

## ಅನುಭವ ಕಲಿಸಿದ ಕಲಿಕೆ

ಕಲಿಕಾ ಅನುಭವ ಹಂಚಿಕೆಯಲ್ಲಿ ನಾನು ಕಸಗಳಲ್ಲಿ
ನಾಲ್ಕು ವಿಧಗಳಿರುವುದನ್ನು ತಿಳಿದುಕೊಂಡೆ.
ಪ್ಲಾಸ್ಟಿಕ್ ಬೇಗ ಗೊಬ್ಬರ ಆಗದಿರುವುದರಿಂದ
ಹೆಚ್ಚು ಬಳಸಬಾರದು ಎಂದು ಗೊತ್ತಾಯಿತು.
ಯಾವ ಯಾವ ಹಬ್ಬಗಳಲ್ಲಿ
ಹೆಚ್ಚು ಹೆಚ್ಚು ಕಸಗಳಾಗುತ್ತವೆ
ಎಂಬುದು ಗೊತ್ತಾಯಿತು.
ನಮಗೆ ಅವಶ್ಯಕತೆ ಇದ್ದರೆ
ಮಾತ್ರ ವಸ್ತುಗಳನ್ನು
ಕೊಳ್ಳಬೇಕು. ಕಸ
ತೆಗೆದುಕೊಂಡು ಹೋಗಲು
ಬರುವವರಿಗೆ ಹಸಿಕಸ, ಒಣಕಸ ಬೇರೆ ಬೇರೆ
ಮಾಡಿಕೊಟ್ಟು ಅವರಿಗೆ ಸಹಕಾರ ನೀಡಬೇಕು.



– **ಪಾರ್ಥ ಹೆಗಡೆ,** ೪ನೇ ತರಗತಿ

## ಚಿಟ್ಟೆ ಚಿಟ್ಟೆ ನನಗೂ ಬಣ್ಣ ಕೊಡು



ಚಿಟ್ಟೆ ನೀ ಬಾ ಬಾ ನನಗೂ
ಬಣ್ಣ ಕೊಡು
ತುಂಬಾ ಬಣ್ಣ ಯಾಕೆ ನಿನಗೆ?
ಮಗು, ನನಗೆ ರೆಕ್ಕೆ ಇದೆ
ರೆಕ್ಕೆಗೆ ಬಣ್ಣ ಇದ್ರೆ ಚೆಂದ.
ಚಿಟ್ಟೆ, ನಿನಗೆ ರೆಕ್ಕೆ ಯಾಕೆ ಬೇಕು?
ಮಗು, ನಾನು ಹಾರಲು ಬೇಕು.
ನನಗೂ ಸ್ವಲ್ಪ ರೆಕ್ಕೆ ಕೊಡು, ನಾನೂ
ಹಾರ್ತೀನಿ...
ಮಗು, ನನಗೆ ಸುಸ್ತಾಯಿತು ನಾನು
ಹೋಗ್ತೀನಿ!



– **ಸಂಯುತ ,** ೨ನೇ ತರಗತಿ

## ಗೆಜ್ಜೆಯ ರಹಸ್ಯ



ಒಂದು ಹಳ್ಳಿಯ ಪಕ್ಕ ದಟ್ಟವಾದ ಕಾಡಿತ್ತು. ಆ ಹಳ್ಳಿಯ ಸಣ್ಣ ಹುಡುಗಿಗೆ ಕಾಡಿನಲ್ಲಿ ಬೆಳೆಯುವ ಹಣ್ಣು ಬೇಕಿತ್ತು. ಹಣ್ಣು ತರಲು ಕಾಡಿಗೆ ಹೋಗುತ್ತಿರುವಾಗ ಅವಳ ಕಾಲಿನ ಗೆಜ್ಜೆ ಬಿದ್ದು ಹೋಯಿತು. ಆದರೆ, ಅವಳಿಗೆ ಗೊತ್ತಾಗಲಿಲ್ಲ. ಕಾಡಿನಿಂದ ಹಣ್ಣನ್ನು ತೆಗೆದುಕೊಂಡು ಸೀದಾ ಹಳ್ಳಿಗೆ ಬಂದಳು. ಆ ಗೆಜ್ಜೆಯನ್ನು ಒಂದು ಪಕ್ಷಿ ತೆಗೆದುಕೊಂಡು ಹೋಗುತ್ತಿತ್ತು. ಅದಕ್ಕೆ ಭಾರ ತಡೆಯಲಾರದೆ ಗೆಜ್ಜೆಯನ್ನು ಕೆಳಗೆ ಬೀಳಿಸಿತು. ಅದು ಆಲದ ಮರದ ಕೊಂಬೆಗೆ ಸಿಕ್ಕಿಹಾಕಿಕೊಂಡಿತು. ಆ ಮರದಲ್ಲಿ ತುಂಬಾ ಎಲೆಗಳು ಇದ್ದ ಕಾರಣ ಯಾರಿಗೂ ಗೆಜ್ಜೆ ಕಾಣಿಸುತ್ತಿರಲಿಲ್ಲ. ಜೋರಾಗಿ ಗಾಳಿ ಬೀಸಿದಾಗ ಆ ಗೆಜ್ಜೆಯಿಂದ ಜಲ್ ಜಲ್ ಸದ್ದು ಆಗುತ್ತಿತ್ತು. ಆ ಸದ್ದನ್ನು ಕೇಳಿ ಊರಿನ ಜನರು ಆ ಕಾಡಿಗೆ ಹೋಗುತ್ತಿರಲಿಲ್ಲ. ಈ ವಿಷಯವನ್ನು ಇಬ್ಬರು ಮಾತನಾಡುತ್ತಿರುವುದನ್ನು ಕೇಳಿದ ಪುಟ್ಟ ಹುಡುಗ, ಆ ಮರದ ಹತ್ತಿರ ಹೋದ. ಅಲ್ಲಿ ಬರಿ ಗೆಜ್ಜೆ ಸದ್ದು ಅಲ್ಲ, ಯಾರೋ ಮಾತಾಡ್ತಾ ಇದ್ರು ಎಂದು ಹಳ್ಳಿಯವರಿಗೆ ಹೇಳಿದ. ಹಳ್ಳಿಯ ಐದು ಜನರು ಅಲ್ಲಿಗೆ ಹೋದರು. ಅಲ್ಲಿ ನೋಡಿದರೆ, ಹುಡುಗಿ ಗೆಜ್ಜೆಯನ್ನು ಕಾಲಿಗೆ ಹಾಕಿಕೊಳ್ಳುತ್ತಿದ್ದಳು. ಅವಳನ್ನು ವಿಚಾರಿಸಿದಾಗ, ಗೆಜ್ಜೆಯ ಸದ್ದಿನ ರಹಸ್ಯ ಬಯಲಾಯಿತು.



– **ಸಂಚಿತಾ,** ೫ನೇ ತರಗತಿ

## ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಿ

ನೀವು ಸಹ ಎಲ್ಲ ಕಡೆ ಕಂಡಿರಬಹುದು, ಜನರು ಪ್ಲಾಸ್ಟಿಕ್ ಅನ್ನು ಬೇಜವಾಬ್ದಾರಿಯಾಗಿ ಬಳಸುತ್ತಿದ್ದಾರೆ. ನೀವು ಯೋಚನೆ ಮಾಡಿದ್ದೀರೋ, ಇಲ್ಲವೋ ಗೊತ್ತಿಲ್ಲ. ಆದರೆ ನಾನಂತೂ ಪ್ಲಾಸ್ಟಿಕ್ ನಿಷೇಧಿಸಬೇಕು ಎಂದು ಯೋಚನೆ ಮಾಡಿರುವೆ. ಪ್ಲಾಸ್ಟಿಕ್ ಕೊಳೆಯುವುದಿಲ್ಲ, ಅದನ್ನು ಸುಟ್ಟರೆ ಅದರಿಂದ ಕೆಟ್ಟ ಅನಿಲ ಬಿಡುಗಡೆಯಾಗುತ್ತದೆ. ಪ್ಲಾಸ್ಟಿಕ್ ಕಂಡುಹಿಡಿದವರು ಲಿಯೋಬೇಕ್ ಲ್ಯಾಂಡ್. ಕೊಳೆಯದ ಪ್ಲಾಸ್ಟಿಕ್ ಕಂಡುಹಿಡಿಯುವ ಮುಂಚೆ ಕೊಳೆಯುವ ಪ್ಲಾಸ್ಟಿಕ್ ಅನ್ನು ಅಲೆಕ್ಸಾಂಡರ್ ಪಾರ್ಕೆಸ್ ಕಂಡುಹಿಡಿದಿದ್ದರು. ಅವರು ಸೆಲ್ಯೂಲೋಸ್ ಪ್ಲಾಸ್ಟಿಕ್ ಕಂಡುಹಿಡಿದರು. ದಯವಿಟ್ಟು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ ಪರಿಸರ ಉಳಿಸಿ.



– **ಮಯೂರ್ ಎನ್.,** ೫ನೇ ತರಗತಿ

# A step towards change

We are already in the end of 2019, but the people are same as 19th century. Plastic covers, bags, toys and other things are still produced, sold, bought, used and finally thrown in the open. All know that plastic doesn't rot for many years. Spreading awareness is not a solution to the problem, whereas applying awareness to oneself and following it is vital.



The best way to stop encouraging plastic is to avoid them by saying "NO".

Recently I attended a function, where they had used plastic bottles instead of paper cups to serve water. Surprisingly they were educated. But they were not worried about the harm they are causing to the nature. I was wondering why though educated they are not bothered about nature? By this I got to know that having knowledge without practicing it is useless. So, let us not be the citizens who are educated only theoretically. Let us be the upcoming citizens who not only reads or writes about it, but also practice it for oneself.



Gandhiji was alone in the beginning of the freedom struggle. By seeing and applying his strategies people changed their mind and followed the path of Gandhiji . So, let's be the modern Gandhiji's of our modern society.

**-Megha S,** 10th Standard.

# THEME BASED LEARNING

At first we, the students were divided into vertical groups. We went to our respective groups and discussed about waste and waste management. We watched videos relating to waste. We visited Solid waste management unit in JP nagar. There we saw waste dumped in open. MCC officials Nagaraj anna and Spoorthi akka had come to our school. They told us to never throw waste on the road and explained about the waste management in Mysore. Spoorthi akka showed videos on waste segregation. Then we saw 'Poramboku' dance video. I liked the dance.

There was a debate on 'kollubhaka samskruthi'. 7th to 10th std students participated in the debate. We 5th std students were the audience. I was in English team. Pragna and Manasa were also in the same team. We were engaged in activities like making puzzles, pulp preparation and handmade chalk pieces. We made invitations from outdated wedding cards and also made designs on it. I liked the designs because I had made it.



We had sharing on Saturday, 23rd November 2019. I liked my chart work. My topic was making bag from old t-shirt. Parents came to our group to see our presentation. In the break, we were given two ragi biscuits and a banana. I liked ragi biscuits. Then the cultural programmes started. I enjoyed it. All programmes were great.

**- Mythri S,** 5th standard.

## My Learning on Theme based Study

I learnt about a new topic in theme based learning "Waste". We thought about waste management. There are Five R's : Reuse, Recycle, Refuse,Repurpose and Reduce. In the Five R's our theme's topic was Recycle. I was in Joylyn Akka's team. I did not know how to recycle old T shirts, old clothes, chalk powder,waste paper and vegetable peels. I was very happy because my mother also got to know about many things. This topic of waste management was very helpful to all and I learnt many things from this theme based learning. We also got to know from our volunteers about waste management in Germany.I enjoyed this year's theme based learning and learnt many things. We also visited waste dumpyard to know the difficulty workers face in segregation. If we produce more garbage, our life will be in danger, so please avoid plastic and save life, save nature.



**- Hamsa,** 9th Standard

# My experience in Pilikula Nisargadhama

On 28th of November we, the high school students had been on a tour to Pilikula Nisargadhama. We left Mysuru at about 10 'o' clock.. In the bus we watched the film Jumanji. Around 4 'o' clock early in the morning we were in the campus of Pilikula. Around 8 'o' clock in the morning, we were ready to visit the places. First,we went to Gutthu mane (old traditional house) which is inside the forest. We went by walk(2 kms) after having breakfast in the nearby restaurant. We saw many antic pieces in Gutthu mane. We saw 'Pallakki'. In olden days, the Royal people like King, queen and mother of King etc used to travel in that. We also saw the instruments which were used for hunting, cooking and so on. The things are well preserved.



After that we went to Medicinal garden. There we saw many varieties of medicinal plants and trees. Uday anna taught us about medicinal importance of these plants. I was surprised by his words, as he showed a tree and said "If the bark of this tree is powdered, the powder can used to prepare soup". This is useful to prevent skin diseases and diabetes. We learnt about many medicinal plants. Later we went to the zoo to see some animals. I was surprised to see many 'Rock python' snakes in one cage. The zoo wasn't as big as Mysuru zoo, but it was good.

In the evening we went to Mangaluru beach. It was 25 minutes travel from our room. My friends and I decided not to swim there.. I wonderd if it was real or dream, when I stood in front of the beach, as big ships were moving. I haven't seen that before. We played on the sea shore. We collected some small crabs which were inside the sea shells. Amogha said, if we detach the shell from the crab, the crab will die. We returned to our room after the sunset. While returning, we visited a temple.

On the second day morning, we went to physics park. There we saw lever mechanism, multiple sound reflection, center of gravity, newton's pendulum and many more. Next we visited the museum which is in the park premises. It was almost like Bangalore Vishweshwaraiah museum. After that we went to Planetarium where there was a sky watch film theatre. When I entered the theatre, I felt as if I am in a magical world. The theatre screen was on the roof and was very big. We had 3D goggles to watch the movie. The movie was about the Rower which first landed on Mars and Moon. It was my first experience watching 3D movie. Everybody in the theatre were screaming when the rower in the film falls on earth with failure. We felt as if the rower is falling on us. It was my best experience ever. When we came out, I felt like I had returned to earth from mars. On our way back, we visited a school in Puttur. There was a science exhibition "Anweshana". Children there were explaining about science themes and technologies which are useful to the society. There was a tool made for climbing the tree. I said to myself " This is called the invention".



On our journey back, we were dancing in the bus. We reached Mysuru at 10:30 pm. The tour has ended. But the things which I learnt, will influenc me to do good things in my life....

**-Preetham M.R., 9th** Standard